ಶ್ರೀ ಹೆಚ್. ಡಿ. ದೇವೇಗೌಡ.—ತಿಪಟೂರ್‌ನಲ್ಲಿ ಈ ರೀತಿ ಕುಡಿಯುವ ನೀರಿನ ತೊಂದರೆ ಇದೆ ಎಂದು ನನ್ನ ಹೈೇಹಿತರಾದ ಶ್ರೀಮಾನ್ ಟಿ. ಎಂ. ಮಂಜುನಾಥ್‌ರವರು ಒಂದು ವಾರದ ಹಿಂದೆ ಹೇಳಿದರು. ಇದುವರೆಗೂ ಅಲ್ಲಿಗೆ ಯಾವ ರಿಗ್ ಮೆಷಿನ್ ಹೋಗಲಿಲ್ಲ, ಅಲ್ಲಿ ಯಾವುದೂ ಕೂಡ ನೀರಿನ ಸಮಸ್ಯೆಯನ್ನು ಬಗೆಹರಿಸಲಿಲ್ಲ. ಅದೇ ರೀತಿಯಾಗಿ ಅರಸೀಕೆರೆ, ಮೈಸೂರು, ಇನ್ನು ಕೆಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಆದುದರಿಂದ ಈ ಸಮಸ್ಯೆಯನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಜರೂರಾಗಿ ಬಗೆಹರಿಸಲು ಟೆಲಿಫೋನ್ ಇನ್‌ಸ್ಪೆಕ್ಷನ್ ಮೇಲೆ ಕೆಲಸಮಾಡಿಸಿ ಆದಷ್ಟು ಜಾಗ್ರತೆ ಸಮಸ್ಯೆಯನ್ನು ಬಗೆಹರಿಸುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ನಾವು ಅವರಿಗೆ ಒಂದು ಪ್ರೊಗ್ರಾಂ ಕೊಟ್ಟಿದ್ದೇವೆ. ಆದರ ಪ್ರಕಾರ ಒಂದು ದಿವಸಕ್ಕೆ ಒಂದು ಬಾವಿ ತೆಗೆಯಬೇಕು ಎಂತ ಇದೆ. ಅವರು 15 ದಿವಸಕ್ಕೆ ಒಂದು ಸಾರಿ ರಿಪೋರ್ಟ್ ಕಳುಹಿಸಬೇಕು. ಅವರು ಕೆಲಸ ಮಾಡದೇ ಇದ್ದರೆ ಅವರನ್ನು ಹೇಗೆ ವಿಪ್ ಮಾಡಬೇಕು ಎನ್ನುವುದನ್ನು ವಿಚಾರ ಮಾಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಈ ಬಾವಿಯನ್ನು ಆಳ ಮಾಡುವುದಕ್ಕೆ ಬೇಕಾದಷ್ಟು ದುಡ್ಡು ಇದೆ ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ಆದರೆ ಈಗಾಗಲೇ ಬಾವಿಯನ್ನು ಆಳ ಮಾಡಿದ ಕಂಟ್ರಾಕ್ಟರಿಗೆ ಒಂದು ಆಣೆ ದುಡ್ಡೂ ಕೊಟ್ಟಿಲ್ಲ. ಈ ಕಾರಣದಿಂದ ಬಾವಿಯನ್ನು ಆಳ ಮಾಡುವುದಕ್ಕೆ ಕಂಟ್ರಾಕ್ಟರ್ಸ್ ಬರುವುದಿಲ್ಲ. ಆದ್ದರಿಂದ ಈ ಕೆಲಸಕ್ಕೆ ಸಾಕಷ್ಟು ದುಡ್ಡನ್ನು ಒದಗಿಸಿ ಕೊಡಬೇಕು ಎಂದು ಕೇಳುತ್ತೇನೆ.

ಎರಡನೆಯದಾಗಿ ಮಾನ್ಯ ರಾಚಯ್ಯನವರು ಬಂದಿದ್ದರು. ಕುಡಿಯುವ ನೀರಿಗೆ ತೊಂದರೆ ಇದೆ ಎಂದು ಹೇಳಿಕೊಂಡಾಗ ಬಾವಿಯನ್ನು ಆಳ ಮಾಡುವ ಕೆಲಸದ ಬಗ್ಗೆ ಅವರು ಡೆಪ್ಯೂಟಿ ಕಮೀಷನರಿಗೆ ಹೇಳಿ ಬಂದರು. ಡೆಪ್ಯೂಟಿ ಕಮೀಷನರು ಬಿ.ಡಿ.ಓ. ಗೆ ಆದೇಶಕೊಟ್ಟರು. ಡಿ.ಡಿ.ಓ. ಅವರು ವಿಲೇಜ್ ಪಂಚಾಯತಿ ಥೇರ್ಮನ್‌ಗೆ ಹೇಳಿದರು. ಅವರು ಈ ಕೆಲಸ ಮಾಡಿಸಿದರು. ಇದನ್ನು ನಾನು ಏತಕ್ಕೆ ಹೇಳಿದೆ ಎಂದರೆ ತಾವು ಡೆಪ್ಯೂಟಿ ಕಮೀಷನರಿಗೆ ಆದೇಶ ಕೊಟ್ಟರೆ ಅವರು ಬಿ.ಡಿ.ಓ. ಗೆ ಹೇಳುತ್ತಾರೆ. ಬಿ.ಡಿ.ಓ. ಪಂಚಾಯತಿ ಥೇರ್ಮನ್‌ಗೆ ಹೇಳುತ್ತಾರೆ. ಆ ಪಂಚಾಯತಿ ಥೇರ್ಮನ್ ಕೆಲಸ ಮಾಡಿಸಿದರೆ ದುಡ್ಡು ಕೊಡುವುದಿಲ್ಲ. ಅದಕ್ಕೆ ಈ ಮಾತನ್ನು ಹೇಳಬೇಕಾಯಿತು. ಆದುದರಿಂದ ತಾವು ಯಾವುದಾದರೂ ಕೆಲಸ ಮಾಡುವಾಗ ಕ್ರಮವರಿತು, ತಕ್ಷಣ ಜನಗಳಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಈ ರೀತಿ ಮಾಡಿ ಜನಗಳಿಗೆ ಬೇಗನೆ ಬಾವಿ ತೆಗೆಸಿಕೊಡಿ. ಬಾವಿ ತೆಗೆಯುವುದಕ್ಕೆ ಜನ ಮುಂದೆ ಬಂದರೂ ದುಡ್ಡು ಕೊಡುವುದಿಲ್ಲ. ಆದುದರಿಂದ ನಾನು ಹೇಳುವುದು ತಕ್ಷಣ ಯಾರನ್ನಾದರೂ ಅಲ್ಲಿಗೆ ಕಳುಹಿಸಿ, ಜಿಲ್ಲದೇ ಹೋದರೆ ಅವರಿಗೆ ಕರ್ತವ್ಯವಾಗಿ ಆದೇಶ ಕೊಟ್ಟು, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ನಿಮ್ಮನ್ನೆ ಹೇಳುತ್ತಿಲ್ಲ. ಆದರೆ ಅಲ್ಲಿರತಕ್ಕ ಕಷ್ಟದ ಜೊತೆಗೆ ಮಾತಿನ ಕಷ್ಟವನ್ನೂ ಸೇರಿಸಬೇಡಿ. ಬಾವಿಗಳನ್ನು ಆಳವಡಿಸತಕ್ಕ ಬಗ್ಗೆ 32 ಆರ್. ಡಿ ವರ್ಕ್ಸ್‌ನಲ್ಲಿ ಪ್ರಾವಿಜನ್ ಇಲ್ಲ. ಸಂಬಂಧಪಟ್ಟ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿನವರೇ. ಆ ಕೆಲಸಗಳನ್ನು ಮಾಡಿಸಿಕೊಳ್ಳಬೇಕು. ಆದರೆ ಪರಿಣತರ ಅಭಿಪ್ರಾಯದಲ್ಲಿ ಈ ಬಾವಿಗಳನ್ನು ಆಳವಡಿಸುವುದಕ್ಕಿಂತ ಹೊಸ ಬಾವಿಗಳನ್ನು ಮಾಡುವುದೇ ಲೇಸೆಂದು ಹೇಳುತ್ತಿದ್ದಾರೆ. ಈ ಆರ್.ಡಿ. ವರ್ಕಿನಲ್ಲಿ 50 ಲಕ್ಷ ರೂಪಾಯಿಗಳಷ್ಟು ಇನ್ನೂ ಹಣವಿದೆ. ಇದು ಬಹಳ ಅಗತ್ಯವಾಗಿ ಆಗ ಬೇಕಾದ ಕೆಲಸವಾದ್ದರಿಂದ ಮಾಡಿಸೋಣ.

(*iii*) *re* : enchancement of water rate by the Bangalore Water Supply and Sewerage Board.

Sri T. R. SHAMANNA (Fort).—Sir, I call the attention of the Hon. Minister for Transport and Housing to the proposed enchancement of water rate by the Bangalore Water supply and sewerage Board.

Sri K. H. RANGANATH (Minister for Transport and Housing).— Sir, in reply to the above Calling attention notice I make the following statement :

In view of commissioning of the Cauvery Water Supply Scheme which conveys water from a distance of nearly 100 Kms. over a head of 1500 feet the working expenses of the Board have increased considerably, nearly four fold. While the present running charges are about Rs. 180 Lakhs per annum, the running charges of the integrated scheme work out to nearly Rs. 750 lakhs. Thus the extra burden has to be shared by one section of the society or the other.

With this background in our minds we have tried to work out the present water rates in such a manner that the escalation in rates is as little as possible in the lower slabs of consumption so that the poorer sections of the society are spared of the hardship. Also while the enhancement in rates for domestic consumption is not appreciable the enhancement for non-domestic consumption is considerably higher. A statement showing the proposed water rates is enclosed herewith.

From the Statement it is seen that the present free allowance of 25,000 litres is maintained unchanged. Further the increase in the next slab is only Rs. 0.05 P. which is negligible. It may be seen that in the higher slab of consumption it affects only the affluent society. The rate is proposed at Rs. 80 P. per 1,000 Litres which is double the present rate of Rs. 40 P.

In the case of non-domestic consumption the increase is somewhat higher due to the increased capacity for payment in case of institutions like Industries, Hotels, Restaurants, business houses etc. There was no alternative to this, as only by this increase, we are in a position to balance the expenditure and the revenue of the Board, in such a manner the Board would be able to manage and maintain the water supply and distribution to the city on a somewhat no profit no loss basis.

A comparison of the water rates existing in some important cities in India will reveal that the rates now proposed by the Bangalore Water Supply and Sewerage Board are reasonable taking into account the conditions peculiar to Bangalore. While the domestic rates in Bombay are of the order of Rs. 0-25 P. to Rs. 0-50 P. per 1,000 litres the non-domestic rates range from Rs. 0-80 P. to Rs. 1-70 P. per 1,000 Litres. Thus the industries and Trade Sectors are required to bear heavier burden compared to domestic sectors, even under gravity schemes. While in other cities the source of water is closely and water is conveyed by gravity, the long distance and the high head involved in the case of Bangalore necessitate higher water rates. Further keeping in view that the industrial sector is required to bear heavy burden, it is proposed that any additional burden on industrial sector would be distributed over a wider section of the society.

In case of Bombay the rate for consumption through Public fountains is fixed at Rs. 0-80 P. per 1,000 litres. Since the average cost of water is Rs. 0-80 P. per 1,000 litres in Bangalore the Bangalore Water Supply and Sewerage Board has fixed the water rate for consumption through public fountains at Rs. 0-80 P. per 1,000 litres.

Thus utmost care is taken to work out a system of rates which can be termed as proper and acceptable to the society which incidentally meets all the points mentioned in the notice.

WATER RATES

I. Domestic Connections when Assessed to Property Tax By the Corporation

Consumption :	Rate per 1,000 Litres	
	Existing	Proposed
1) Upto 25,000 litres	Free	Free
2) Above 25,000 litres upto 50,000 litres	25 P	30 P
3) Above 50,000 litres upto 75,000 litres	30 P	30 P
4) Above 75,000 litres upto 1,00,000 litres	40 P	60 P
5) About 1,00,000 litres.	40 P	80 P

II Domestic connections when not assessed to property Tax by the Corporation

1) Upto 25,000 litres	25 P	25 P
2) Above 25,000 litres upto 50,000 litres	25 P	30 P
3) Above 50,000 litres upto 75,000 litre	30 P	40 P
4) Above 75,000 litres upto 1,00,000 litres	40 P	60 P
5) Above 1,00,000 litres	40	80

(SRI K. H. RANGANATH)

Consumption :	Rate per 1,000 Litres	
	Existing	Proposed
III Non Domestic Connections :		
1) Upto 10,000 litres	Rs. 4.50 P per month	Rs. 8.00 per month
2) Above 10,000 litres upto 20,000 litres.	48 P. per 1,000 litres	Rs. 1.50 p. per 100 litres.
3) Above 20,000 litres upto 40,000 litres	54 P. per 1,000 litres.	Rs. 2.00 per 1,000 litres.
4) Above 40,000 litres upto 1,00,000 litres	66. P. per 1,000 litres.	Rs. 3.00 per 1,000 litres
5) Above 1,00,000 litres	66 P per 1,000 litres 33 P	Rs. 3.50 P per 1,000 litres. 80 p
IV. Raw water	*Existing*	*Proposed*
	33 Ps. per 1,000 litres (Flat)	80 Ps. per 1,000 litres (Flat)
V. Water supplied to Corporation through Public Fountain:		
	30 Ps. per 1,000 litres.	80 Ps. per 1,000 litres.

ಶ್ರೀ ಟಿ. ಆರ್. ಶಾಮಣ್ಣ.—ಈಗ ಕೆಲವು ಬಡ ಸಂಸಾರಗಳಿಗೆ ಸ್ವಲ್ಪ ರಿಯಾಯಿತಿಯನ್ನು ತೋರಿಸಿದ್ದಾರೆ, ಸಂತೋಷ. ಹೀಗೆ ಬಡವರಿಗೆ ಒಂದು ಅನುಕೂಲವನ್ನು ಕೊಡತಕ್ಕ ಸಂದರ್ಭದಲ್ಲಿ ಜನಸಾಮಾನ್ಯರ ಮೇಲೆ ಈ ಬಾಬಿನಲ್ಲಿ ಇನ್ನೂ ಹೆಚ್ಚಿನ ತೆರಿಗೆ ಬೀಳದಂತೆ ನೋಡಿಕೊಳ್ಳುವುದಾಗಿ ತಾವು ಭರವಸೆಯನ್ನು ಕೊಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಹಾಗೆ ಭರವಸೆಗಳನ್ನು ಕೊಡುವುದಕ್ಕಾಗುವುದಿಲ್ಲ. ಇದರಲ್ಲಿ ಬಡಜನರಿಗೆ ಹೆಚ್ಚಿನ ಅನುಕೂಲವಾಗಿದೆ ಎಂಬುದನ್ನು ಮಾನ್ಯ ಸದಸ್ಯರೂ ಒಪ್ಪಿದ್ದಾರೆ. ಒಂದು ಕೋಟಿ 80 ಲಕ್ಷ ರೂಪಾಯಿ ಇದ್ದ ಖರ್ಚು ಏಳೂವರೆ ಕೋಟಿ ರೂಪಾಯಿಗೇರಿದೆ. ಆದುದರಿಂದ ಆಶ್ವಾಸನೆಯನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದವರು 25 ಸಾವಿರ ಲೀಟರೊಳಗೆ ಇರತಕ್ಕವರಿಗೆ ಉಚಿತವಾಗಿ ನೀರನ್ನು ಸರಬರಾಯಿ ಮಾಡತಕ್ಕ ಬಗ್ಗೆ ನಾನು ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಆದರೆ 60 ಮಿಲಿಯನ್ ಗ್ಯಾಲನ್ನಿಗೆ 36 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಇವೇ ಸಭೆಯಲ್ಲಿ ಮಾನ್ಯ ಸಚಿವರು ಭರವಸೆ ಕೊಟ್ಟಿದ್ದು ಹೋಗಿ ಈಗ ಅಷ್ಟೇ ಹಣ ಕೇವಲ 30 ಮಿಲಿಯನ್

ಗ್ಯಾಲನ್ನಿಗೆ ಖರ್ಚಾಗಿದೆ. 30 ಮಿಲಿಯನ್ ಗ್ಯಾಲನ್ನಿಗೆ ಹಲವು ಜಾರಿ ಖರ್ಚಾಗುವುದಿಲ್ಲ ಎಂದು ಇಷ್ಟು ಹಣ ಕೊಟ್ಟಿದ್ದು ಭರವಸೆ ತಪ್ಪಿ ಈಗ ಒಂದಕ್ಕೆ ಎರಡರಷ್ಟು ಹಣ ಖರ್ಚಾಗಿದೆ. ಇದಕ್ಕೆ ಕಾರಣರು ಯಾರು ಎಂಬುದನ್ನು ಕಂಡುಹಿಡಿಯಬೇಕು. ಈಗ ಈ ಹೆಚ್ಚಿನ ಹೊರೆಯನ್ನು ಎಲ್ಲರ ಮೇಲೂ ಹೊರಿಸುವುದು ಸರಿಯೇ ?

ಈಗ ನಾವು 25,000 ಲೀಟರ್ಸ್ ಇಂದ 50,000 ಲೀಟರ್ಸ್‌ವರೆಗೆ ಐದುಪೈಸೆಯನ್ನು ಹೆಚ್ಚು ಮಾಡಿದ್ದೀರಿ. ಇದು ಎಸ್ಕಿಮೇಟ್ ಎಸ್ಟಾರೇಷನ್ ಇಂದ ಆಗಿದುತ್ತದೆ. ಆದ್ದರಿಂದ ಇದು ಜನಗಳ ತಪ್ಪಲ್ಲ. ಬೆಂಗಳೂರು ನಗರದಲ್ಲಿ ಮಧ್ಯಮ ವರ್ಗದ ಜನರು ಹೆಚ್ಚು ಇದ್ದಾರೆ. ಇದು ಹೆಚ್ಚು ಮಧ್ಯಮ ವರ್ಗದವರ ಮೇಲೆ ಬೀಳುತ್ತದೆ ಆದ್ದರಿಂದ ನಾವು ಇದನ್ನು ಸ್ವಲ್ಪ ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರಿಗೆ ಎಲ್ಲಾ ವಿಷಯ ಗೊತ್ತಿದೆ. 25,000 ಲೀಟರ್‌ವರೆಗೆ ರಿಯಾಯಿತಿ ಕೊಟ್ಟಿದ್ದೇವೆ. ಮತ್ತೆ ಹಳೆಯ ಎಸ್ಟಿಮೇಟ್ ಕಡಿಮೆ ಇತ್ತು ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡುವುದಾದರೆ, ನಾವು ಈ ಸ್ಕೀಂನ್ನು ವಿಚಾರ ಮಾಡಿದ್ದು ಯಾವಾಗ ? ಅದನ್ನು ಮುಗಿಸುವುದಕ್ಕೆ ಎಷ್ಟು ಕಾಲ ಆಯಿತು ? ಈ ಮಧ್ಯದಲ್ಲಿ ಆದ ಬೆಲೆ ಏರಿಕೆಯ ಪರಿಸ್ಥಿತಿಯಿಂದ ಈ ಒಂದು ಪರಿಸ್ಥಿತಿ ಬಂತು. ಅಲ್ಲದೆ ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ, ಈ ಸ್ಕೀಂ ತಡವಾಗಿದ್ದರೆ, ನಾವು ಇನ್ನೂ ನಾಲ್ಕೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ಜಾಗ್ರತೆಯಾಗಿ ಕೆಲಸ ಮಾಡಿ ಮುಗಿಸಿದ್ದರಿಂದ ಎಷ್ಟೋ ಹಣ ಉಳಿತಾಯವಾಗಿದೆ, ಇದನ್ನು ಮಾನ್ಯ ಸದಸ್ಯರು ಮೆಚ್ಚುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನೊದಲನೆಯ 25 ಸಾವಿರ ಲೀಟರ್ಸ್‌ಗೆ ಫ್ರೀ ಅಬ್ಸೋಯನ್ಸ್ ಕೊಟ್ಟಿದ್ದೇವೆ, ಅದಾದ ನಂತರ, 25 ಸಾವಿರ ದಿಂದ 50 ಸಾವಿರ ಲೀಟರ್‌ವರೆಗೆ 5 ಪೈಸೆಯನ್ನು ಜಾಸ್ತಿಮಾಡಿದ್ದೇವೆ, 55 ಸಾವಿರ ಲೀಟರ್‌ನಿಂದ, 75 ಸಾವಿರ ಲೀಟರ್‌ವರೆಗೆ 10 ಪೈಸೆ ಜಾಸ್ತಿಯಾಗಿದೆನೋ ಪ್ರಾಫಿಟ್, ನೋರಾಸ್ ಬೇಸಿಸ್ ಮೇಲೆ ದರವನ್ನು ನಿಗದಿ ಮಾಡಬೇಕು ಎಂದು ಮಾಡಿದ್ದೇವೆ. ಇದರಲ್ಲಿ ನಾವು ಪ್ರಾಫಿಟ್ ಮಾಡಲಿಕ್ಕೆ ಹೊರಟಿಲ್ಲ. ಮತೊಂದು ಮಾತನ್ನು ಹೇಳುವುದಾದರೆ, ಮೊದಲನೆಯ ಮೂರು ವರ್ಷಗಳಲ್ಲಿ ಸುಮಾರು ಹಣ ಇದಕ್ಕೆ ನಷ್ಟವಾಗತಕ್ಕಂಥ ಪರಿಸ್ಥಿತಿ ಇತ್ತು. ಸ್ಟೇಟ್‌ಮೆಂಟ್ ಪ್ರಕಾರ, ಪ್ರಾಬಬರ್ ರಸೀಟ್ ಮತ್ತು ಪ್ರಾಬಬರ್ ಎಕ್ಸ್‌ಪೆಂಡೀಚರ್ ಫ್ರೀ ವಾಟರ್ ಸಪ್ಲೈ ಇನಕ್ಲೂಸೀವ್ ಆಫ್ ಹೈರ್ ಚಾರ್ಜಸ್ ಈ ರೀತಿ ಇದೆ : 1974-75 ರಲ್ಲಿ 6,7,37,000 ರೂಪಾಯಿಗಳು ವರಮಾನ ಬರುವುದಾದರೆ, ಖರ್ಚು 7,49 81,000 ರೂಪಾಯಿಗಳು ಆಗುತ್ತದೆ, 1975-76 ರಲ್ಲಿ ಆದಾಯ 6,55,98,000 ರೂಪಾಯಿಗಳು ಬರುವುದಾದರೆ, ಖರ್ಚು 7,3,97,000 ರೂಪಾಯಿ ಇರುತ್ತದೆ. ಅದೇ ರೀತಿ 76-77ರಲ್ಲಿ 7,3 68,000 ರೂಪಾಯಿ ಆದಾಯ ಬರುವುದಾದರೆ, ಖರ್ಚು 7,56,9 1,000 ರೂಪಾಯಿ ಆಗುತ್ತದೆ. ಆಮೇಲೆ ನಮಗೆ 1977-78, 1978-79ರಲ್ಲಿ ಸ್ವಲ್ಪ ಆದಾಯ ಬರುತ್ತದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಕೂಡ ನಾವು ಲೆಕ್ಕ ಹಾಕಿ ಇವತ್ತಿನ ದಿವಸ ಬಡತನದಲ್ಲಿ ನರಳುತ್ತಾ ಇರತಕ್ಕ ಜನಗಳು ಯಾರಿದ್ದಾರೋ ಅವರಿಗೆ ಹೆಚ್ಚು ಭಾರ ಹಾಕಬಾರದು ಎಂದು ಆಫ್ಲುಯಂಟ್ ಸೆಕ್ಷನ್ ಮೇಲೆ ಸ್ವಲ್ಪ ಜಾಸ್ತಿ ಭಾರವನ್ನು ಹಾಕಿದ್ದೇವೆ. ಆದ್ದರಿಂದ ಈಗ ನಾವು 15 ಪೈಸೆಯನ್ನು ಹೆಚ್ಚು ಮಾಡಿರತಕ್ಕದ್ದು ಅಷ್ಟು ಹೆಚ್ಚೇನೂ ಅಲ್ಲ. ಆದ್ದರಿಂದ ನಾನು ಈ ಸಭೆಯ ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುವುದು ಏನೆಂದರೆ ಇಲ್ಲಿ ನಾವು ಸಾರ್ವಜನಿಕರ ಅಭಿಪ್ರಾಯವನ್ನು ಕ್ರೋಢೀಕರಿಸಬೇಕಾಗುತ್ತದೆ, ಆದ್ದರಿಂದ ತಾವುಗಳು ಜನರಿಗೆ ಇದನ್ನು ನರಿ ಎಂದು ನರಿಯಾಗಿ ಹೇಳತಕ್ಕ ಕೆಲಸವನ್ನು ಮಾಡಬೇಕು ಎಂದು ನಾನು ಹೇಳಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಮಾನ್ಯ ಸಚಿವರು ಹೇಳಿದ ಹಾಗೆ, ನೋ ಪ್ರಾಫಿಟ್, ನೋಲಾಸ್, ಬೇಸಿಸ್ ಮೇಲೆ ನೀರಿನ ದರವನ್ನು ನಿಗಧಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ತರತಕ್ಕಂಥಾದ್ದು 1978ನೇ ಇಸವಿಗೆ ಗೊತ್ತಾಗಿದ್ದರೂ ಇದು 1973ನೇ ಇಸವಿಯಲ್ಲಿಯೇ ಆಗಿತ್ತು. ಇದಕ್ಕೆ ಮುಖ್ಯ ಕಾರಣಕರ್ತರು ವಾಟರ್‌ಸಪ್ಲೈ ಬೋರ್ಡಿನವರು. ಇದಕ್ಕೆ ಡಬ್ಬರ್ ರೇಟ್ ಆಗುವುದಕ್ಕೆ ಅವರೇ ಕಾರಣರು. ಈಗ ಕೇಂದ್ರ ಸರ್ಕಾರದ ಕೈಗಾರಿಕೆಗಳು, ರಾಜ್ಯ ಸರ್ಕಾರದ ಆಫೀಸುಗಳು ಹೆಚ್ಚಿನ ನೀರನ್ನು ಉಪಯೋಗಿಸುತ್ತಿವೆ. ಈ ಎರಡರಿಂದಲೂ ಸ್ವಲ್ಪ ಸಹಾಯವನ್ನು ಪಡೆದು ಜನಗಳಿಗೆ ಹೆಚ್ಚಿನ ರಿಯಾಯಿತಿಯನ್ನು ಕೊಡುವುದಕ್ಕೆ ತಾವು ಯೋಚನೆ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಈ ಸ್ಕೀಂ ಸ್ವಲ್ಪ ತಡವಾಗಿದ್ದಕ್ಕೆ ಬರೀ ಸರ್ಕಾರ ಅಷ್ಟೇ ಕಾರಣ ಅಲ್ಲ, ಬೆಂಗಳೂರು ನಾಗರೀಕರೂ ಕಾರಣರು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಇಲ್ಲಿ ಒಂದು ವಿಷಯವನ್ನು ತಮ್ಮ ನೆನಪಿಗೆ ತರುವುದಕ್ಕೆ ಇಷ್ಟಪಡುತ್ತೇನೆ. ಹೆಚ್ಚು ತೆರಿಗೆ ಇಲ್ಲದೆ ನೀರನ್ನು ಕೊಡಬೇಕು ಎನ್ನುವ ಕಾಲದಲ್ಲಿ, ವರ್ಲ್ಡ್ ಬ್ಯಾಂಕನವರು ತಮ್ಮ ಸಹಾಯವನ್ನು ಮಾಡುವುದಕ್ಕೆ ಸ್ವಲ್ಪ ಹಿಂದು ಮುಂದು ಮಾಡಿ ನಿಧಾನವಾಗಿದ್ದು ಇದೆ. ಮಾನ್ಯ ಸದಸ್ಯರು ಇದನ್ನು ಗಮನದಲ್ಲಿಟ್ಟುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಇವತ್ತಿನ ದಿವಸ ನಾವು ಏನು ವಾಟರ್ ರೇಟ್ ಹಾಕಿದ್ದೇವೆ ಅದು ಸರಿಯಾಗಿದೆ. ಇದು ಯಾವ ರೀತಿಯಾಗಿಯೂ ಜನರಿಗೆ ಬಹಳ ಭಾರವಾಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ.

Installation of a Caustic Soda Factory at Banaka village in Karwar

ಶ್ರೀಮತಿ ರಾಧಾಭಟ್ (ಅಂಕೋಲಾ).—

ಮಾನ್ಯ ಅಧ್ಯಕ್ಷರೇ, ನಾನು ಒಂದು ಮುಖ್ಯವಾದಂಥ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಅದು ಏನೆಂದರೆ, ನಮ್ಮ ಕಾರವಾರ ಜಿಲ್ಲೆಯಲ್ಲಿ ಬಣಕ ಎಂಬ ಊರಲ್ಲಿ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯನ್ನು ಹಾಕುತ್ತಿದ್ದಾರೆ. ಈ ಫ್ಯಾಕ್ಟರಿಯವರು ಸಾವಿರಾರು ಎಕರೆ ಭೂಮಿಯನ್ನು ರೈತರ ಕಡೆಯಿಂದ ವಶಪಡಿಸಿಕೊಂಡಿದ್ದಾರೆ. ಮತ್ತು ಅವರಿಗೆ ಯಾವ ಅನುಕೂಲವನ್ನು ಇದುವರೆಗೂ ಮಾಡಿಕೊಟ್ಟಿಲ್ಲ. ಅವರಿಗೆ ಪರಿಹಾರ ಧನವನ್ನೂ ಕೊಟ್ಟಿಲ್ಲ ; ಭೂಮಿಯನ್ನೂ ಕೊಟ್ಟಿಲ್ಲ. ನೂರಾರು ಮಂದಿ ರೈತರು ವಿಧಾನ ಸೌಧದ ಮುಂದೆ ಕುಳಿತುಕೊಂಡು ಅನಿರ್ದಿಷ್ಟ ಕಾಲದವರೆಗೆ ಮುಷ್ಕರ ಹೂಡಿದ್ದಾರೆ. ಇದರ ಬಗ್ಗೆ ಸರ್ಕಾರದವರು ಕೂಡಲೇ ಗಮನಹರಿಸಿ ಅವರಿಗೆ ಪರಿಹಾರಧನ ಮತ್ತು ಭೂಮಿಯನ್ನು ಒದಗಿಸಿಕೊಡಬೇಕು. ಇಲ್ಲದಿದ್ದರೆ, ಏನಾಗುತ್ತದೆಂದರೆ, ನಮ್ಮ ಊರಲ್ಲಿ ಸಣ್ಣ ಪುಟ್ಟ ಪುಡಾರಿಗಳಿಗೆ ಒಂದು ಅವಕಾಶವನ್ನು ಮಾಡಿಕೊಟ್ಟು ಅಪಪ್ರಚಾರಕ್ಕೆ ನಾವು ಒಳಗಾಗಬೇಕಾಗುತ್ತದೆ. ಉಂಡಾಡಿಗುಂಡರು, ತಿರುಗಾಡುತ್ತಾ ಇರುವವರ ಹೇಳಿಕೆಗೆ ಪ್ರಾಧಾನ್ಯತೆ ಕೊಟ್ಟಂತಾಗುತ್ತದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕು. ರೈತರಿಗೆ ಅನ್ಯಾಯವಾಗದ ರೀತಿಯಲ್ಲಿ ಸಹಾಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ನೋಟೀಸನ್ನು ಸರ್ಕಾರದ ಕಡೆ ಕಳುಹಿಸಿದ್ದೇನೆ. ನಾಲೂಕರವರೆಗೆ ಗಂಟೆಗೆ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಮಂತ್ರಿಗಳು ಬರೆದು ಕಳುಹಿಸಿದ್ದಾರೆ. ಅಲ್ಲಿಯ ಸಮಾಚಾರ ತರಿಸುವುದಕ್ಕೆ ಮಂತ್ರಿಗಳು ಕಾಗದವನ್ನೂ ಬರೆದಿದ್ದಾರೆ.

3-00 P.M.

Stappage of grants to Some Institutions of Phyrically Handicapped

Smt. DAMAYANTHI BORE GOWDA (Srirangapatna).—Madam, I want to bring to the notice of this august House the hardships faced by the institutions for the physically handicapped. They were receiving grants from the Social Welfare Department. In the year 1972-73 they were transferred to tho Education Department.

MADAM SPEAKER.—Has the hon. Member sent me notice ?

Smt. DAMAYANTHI BORE GOWDA.—No.

MADAM SPEAKER.—Please send me notice and I will pass it on to the Government.